



ಕಡ್ಡಾಯವಾಗಿ ಸೊವೆಟೊ ನೋಡಬೇಕು ಎನ್ನುವುದು ನನಗೆ ಅಲ್ಪ ಸ್ವಲ್ಪ ತಿಳಿದಿತ್ತು. ಈ ಸ್ಥಳಕ್ಕೆ ಬಹಳ ಅರ್ಥಗರ್ಭಿತವಾದ, ಮನ ಮಿಡಿಯುವ ಚರಿತ್ರೆಯಿದೆ. ಬ್ರಿಟಿಷರು ದಕ್ಷಿಣ ಆಫ್ರಿಕಾ ಆಳುತ್ತಿದ್ದ ಕಾಲದಲ್ಲಿ ಜನ್ಮತಾಳಿದ ಪ್ರದೇಶವಿದು. ವರ್ಣಭೇದ ನೀತಿಯ ಕ್ರೂರ ಕಾನೂನಿನ ವ್ಯವಸ್ಥೆಯಲ್ಲಿ ಸಹಸ್ರಾರು ಆಫ್ರಿಕನ್ನರನ್ನು ಬ್ರಿಟಿಷರು ನಗರಗಳಿಂದ ಹೊರಹಾಕಿದ ಕ್ರೌರ್ಯಕ್ಕೆ ಸೊವೆಟೊ ಕೂಡ ಸಾಕ್ಷಿಯಾಗಿದೆ.

ಕೊಳೆಗೇರಿ ಸೊವೆಟೊ ಪ್ರದೇಶದಲ್ಲಿ ನಾವು ಮೊಟ್ಟಮೊದಲು ಭೇಟಿ ನೀಡಿದ ಸ್ಥಳ. ಬ್ರಿಟಿಷರಿದ್ದ ಕಾಲದಲ್ಲಿ ಒಮ್ಮೆ ಮಾರಣಾಂತಿಕಾ ಬ್ಯುಬೋನಿಕ್ ಪ್ಲೇಗ್ ಕಾಯಿಲೆ ಹಬ್ಬಿದಾಗ ದೇಶದಲ್ಲೆಡೆ ಸಾಂಕ್ರಾಮಿಕ ರೋಗದ ಭೀತಿ ಹಬ್ಬಿತ್ತು. ಆಫ್ರಿಕನ್ನರನ್ನು ನಿರ್ದಾಕ್ಷಿಣ್ಯವಾಗಿ ಈ ಕೊಳೆಗೇರಿಗೆ ದೂಡಲಾಗಿತ್ತು. ವಾಸ್ತವವೆಂದರೆ ಈಗಲೂ ಇಲ್ಲಿನ ಸ್ಥಿತಿ ಶೋಚನೀಯವಾಗಿಯೇ ಇದೆ. ಕೊಳಗೇರಿ ಪ್ರವೇಶಿಸುತ್ತಿದ್ದಂತೆ ನಮಗೆ ಶಾಲೆಯಲ್ಲಿನ ಮಕ್ಕಳ ಕಲಿಯುವ ವರ್ಗಗಳು ಕಾಣುತ್ತದೆ. ಆ ಮುಂಜಾನೆಯ ಒಂಬತ್ತು ಗಂಟೆಯ ಸಮಯದಲ್ಲಿ ಮಕ್ಕಳು ಹುಯಿಲು ಎಬ್ಬಿಸಿದ್ದರು. ಶಾಲೆಯನ್ನು ನಡೆಸುವವರು ವಿದೇಶಿಯರು ಇರಬಹುದೆಂದು ಅನ್ನಿಸಿತು. ಬಡತನದ ಕಾರ್ಪಣ್ಯಗಳ ನಡುವೆ ಮಕ್ಕಳ ಮುಗ್ಧ ನಗು ಯಾರಿಗೆ ತಾನೇ ಪ್ರಿಯವಾಗದು?

## ಮಾತು ಮರೆಸಿದ ಮಕ್ಕಳು

ಈ ಪ್ರಾಂತ್ಯದ ಆಡುಭಾಷೆಗಳು ಹಲವು. ನಮ್ಮ ಮಾರ್ಗದರ್ಶಿ ಝುಲುವಿನಲ್ಲಿ ಎರಡು ವಾಕ್ಯಗಳನ್ನು ಬಾಯಿಪಾಠ ಮಾಡಬೇಕೆಂದನು. 'ಸುನಾ ಬೋನಾನಿ' ಎಂದರೆ 'ಹೇಗಿದ್ದೀರಾ' ಎಂದರ್ಥ. ಇದಕ್ಕೆ ಉತ್ತರವಾಗಿ 'ಎಬೋ' (ಚೆನ್ನಾಗಿದ್ದೀನಿ) ಎನ್ನುತ್ತಾರೆ. ಮಾರ್ಗದರ್ಶಿ ನಮ್ಮ ಬಲಕ್ಕಿದ್ದ ಪುಟ್ಟಕೋಣೆಯ ಕದ ದೂಡಿದನು. ಒಳಗಿಂದ ಜಿಗಿದ ಪುಟ್ಟಮಕ್ಕಳು ಎರಡು–ಮೂರು ವರ್ಷದವರಿಗಿಂತಲೂ ಕಡಿಮೆ ವಯಸ್ಸಿನವರು. ಮುದ್ದು ಮಕ್ಕಳು ನಮ್ಮನ್ನು ಕಂಡಾಕ್ಷಣ ಎಂದೋ ಅಗಲಿದ ಆಪ್ತರನ್ನು ಕಂಡಂತೆ ಕಾಲುಗಳನ್ನು ತಬ್ಬಿಹಿಡಿದವು. ಎತ್ತಿಕೋ ಎನ್ನುವಂತೆ ಪುಟ್ಟ ಕೈಗಳನ್ನು ಚಾಚಿದವು. ಮಕ್ಕಳ ಅನಿರೀಕ್ಷಿತ ನಡವಳಿಕೆ ನನ್ನನ್ನು ತಬ್ಬಿಬ್ಬು ಮಾಡಿಬಿಟ್ಟಿತು. ಕಲಿತ ಎರಡೇ ವಾಕ್ಯದ ಝುಲು ಭಾಷೆ ಬಾಯಲ್ಲೇ ಉಳಿಯಿತು. ಈ ಮಕ್ಕಳಿಗೆ ಈಗ ಕೆಲವು ದಶಕಗಳಿಂದಷ್ಟೆ ವಿದ್ಯಾಭ್ಯಾಸ ಲಭ್ಯವಾಗಿದೆ. ಆಫ್ರಿಕನ್ ಜನಾಂಗದವರಲ್ಲಿ ಗತಕಾಲದ ಶೋಷಣೆ, ನೋವು, ಸಂಕಟಗಳನ್ನು ಗೆದ್ದು ನಿಲ್ಲುತ್ತೇವೆ ಎಂಬ ಆತ್ಮವಿಶ್ವಾಸವಿದೆ. ಇದರ ಪ್ರತಿಬಿಂಬ ಮಕ್ಕಳಲ್ಲಿ ಕಾಣಬಹುದು. ಬಹುಶಃ ಈ ಭರವಸೆ, ಶ್ರದ್ಧೆಗೆ ಪ್ರವಾಸಿಗರು ಬೆಂಬಲಿಸಲಿ ಎಂಬ ಆಶಾದಾಯಕ ಭಾವನೆಯಿಂದ ಈ ಸ್ಥಳಗಳಿಗೆ ನಮ್ಮನ್ನು ಕರೆದುಕೊಂಡು ಹೋಗುತ್ತಾರೆ.

ಸೊವೆಟೊದ ಕೊಳೆಗೇರಿಗೆ ಸ್ವಲ್ಪ ದೂರದಲ್ಲಿ ಆಫ್ರಿಕಾದ ಮಹಾನ್ ಹೋರಾಟಗಾರ ನೆಲ್ಸನ್ ಮಂಡೇಲಾ ಅವರು ಹಲವು ವರ್ಷ ವಾಸವಾಗಿದ್ದರು. ಅವರು ವಾಸವಾಗಿದ್ದ ಸ್ಥಳದಿಂದ ಅನತಿದೂರದಲ್ಲಿ 'ಅಪಾರ್ಥೀಡ್ ಮ್ಯೂಸಿಯಂ' ನಿರ್ಮಿಸಿದ್ದಾರೆ. ಈ ಸಂಗ್ರಹಾಲಯವನ್ನು ನೋಡುವಾಗ, ಇಲ್ಲಿಯ ಜನರ ಮನಸ್ಸಿನ ಮೇಲಾಗಿರುವ ಗಾಯದ ಕಲೆಯನ್ನು ಎಂದಿಗೂ ಅಳಿಸಲಾಗದು ಎಂದು ಪ್ರತಿ ನೋಡುಗನಿಗೂ ಅನ್ನಿಸುತ್ತದೆ. ಇಂದು ದಕ್ಷಿಣ ಆಫ್ರಿಕಾ ಸ್ವತಂತ್ರ ನಾಡು. ನೆಲ್ಸನ್ ಮಂಡೇಲಾ, ಡೆಸ್ಮಾಂಡ್‌ಟುಟು ಹಾಗೂ ಸಹಸ್ರಾರು ಆಫ್ರಿಕನ್ನರು ಹಗಲು ರಾತ್ರಿ ಎನ್ನದೆ ರಕ್ತ ಸುರಿಸಿ ಈ ಜನಾಂಗದವರ ಹಕ್ಕುಗಳನ್ನು ಮತ್ತೆ ಪಡೆದುಕೊಂಡಿದ್ದಾರೆ.

ಆಫ್ರಿಕಾದಲ್ಲಿ ಕಳೆದ ಮೊದಲ ದಿನದ ಅನುಭವಗಳು ನನ್ನ ಮನಸ್ಸನ್ನು ಕಲಕಿದ್ದವು. ಕೊಳೆಗೇರಿ ಮಕ್ಕಳ ಅನನ್ಯಪ್ರೀತಿಯ ನೆನಪುಗಳು ಕಾಡುತ್ತಿದ್ದವು. ಅಲ್ಲಿದ್ದ ಒಂದು ಮಗುವಿಗಾದರೂ ಪ್ರೌಢತೆ ಇದ್ದಿದ್ದರೆ, ತಂಡೋಪತಂಡವಾಗಿ ಬರುವ, ನಮ್ಮಂಥವರನ್ನು – 'ನೀವು ಯಾರು? ಈ ಬಡತನದ ಪ್ರದೇಶಗಳಿಗೆ ಏಕೆ ಭೇಟಿ ನೀಡುತ್ತೀರಿ? ನೀವು ತೋರಿಸುವ ಪ್ರೀತಿ ನಮಗೆ ನಿಜ ಅಂತ ಅನ್ನಿಸಬೇಕಾ?' ಎಂದು ಕೇಳುತ್ತಿತ್ತೇನೋ?

ಮರುದಿವಸ ಜೋಹಾನ್ನೆಸ್‌ಬರ್ಗ್‌ನಿಂದ ಕ್ರೂಗರ್ ಅರಣ್ಯಧಾಮಕ್ಕೆ